(2) ಯಲಹಂಕ ಕ್ಷೇತ್ರದಲ್ಲಿ ಬಿ. ಡಿ. ಎ. ಯವರು ವಶಪಡಿಸಿಕೊಂಡಿರುವ ಜಮೀನು ಕುರಿತು :-

ಶ್ರೀ ಬಿ. ಶಿವರಾಜ್ :- ಮಾನ್ಯ ಉಪಾಧ್ಯಕ್ಷರೇ, ಏನಾಗುತ್ತದೆಂದರೆ ಈ ಕಡೆ ನಮ್ಮ ಯಲಹಂಕ ಕ್ಷೇತ್ರದಲ್ಲಿ ಸುಮಾರು 2 ಲಕ್ಷ 50 ಸಾವಿರ ಜನಸಂಖ್ಯೆ ಇರತಕ್ಕ ಒಂದು ಸ್ಥಳದಲ್ಲಿ ಬಿ. ಡಿ. ಎ. ಯವರು ಇವರೆಲ್ಲಾ ಅಕ್ವೈರ್ ಮಾಡಿಕೊಂಡಿದ್ದಾರೆ. ಮಾನ್ಯ ನಗರಾಭಿವೃದ್ಧಿ ಸಚಿವರು ಇದರ ಬಗ್ಗೆ ಉತ್ತರ ಕೊಡಬೇಕು.

ಉಪಾಧ್ಯಕ್ಷರು :- ತಾವು ಅದನ್ನು ಓದಿರಿ. .

ಶ್ರೀ ಬಿ. ಶಿವರಾಜ್ :- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜಮೀನಿನಲ್ಲಿ ಎಷ್ಟು ಅನಧಿಕೃತ ಮನೆಗಳು ಇವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವಶಪಡಿಸಿಕೊಂಡಿರುವ ಜಮೀನಿನಲ್ಲಿ ನಿರ್ಮಿಸಿರುವ ಅನಧಿಕೃತ ಮನೆಗಳನ್ನು ಸಕ್ರಮ ಮಾಡಿದ್ದೀರಾ ಎಂದು ಕೇಳಿದ್ದೇನೆ. ಅದಕ್ಕೆ ಅವರು ಕೊಟ್ಟಿರುವ ಈ ರೀತಿ ಇದೆ. ಇದರ ಬಗ್ಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಅಜಯ್ ಕುಮಾರ್ ಸರ್‌ನಾಯಕ್ (ಯುವಜನಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು) :- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ನಗರಾಭಿವೃದ್ಧಿ ಸಚಿವರ ಪರವಾಗಿ ಈ ಉತ್ತರವನ್ನು ಕೊಡುತ್ತಿದ್ದೇನೆ.

On allotment of site by Bangalore Development Authority to individuals, the allottees come forward for construction of houses after sanction of plan. The exact statistics about total number of houses constructed. or in the process of construction on Bangalore Development Authority acquired land are not readily available.

As per the available statistics 9,700 unauthorised constructions have been identified in the B.D.A. land. Out of this more than 7,500 cases are covered by court stay. These cases can only be decided after disposal of court cases. Out of the remaining, such of the person who have sought relief under Karnataka Regularisation of Unauthorised Construction in Urban Areas Act 1991, the matter will have to be decided by the Competent Authority. In respect of others action will be taken as per Rules. Such of the allottees who are affected by the above excercise will be consider for alternative sites.

4.00 ಪಿ.ಎಂ.

(3) ಈಸ್ಟ್ ಆಫ್ ಎನ್. ಜಿ. ಇ. ಎಫ್. ಬಡಾವಣೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ನಿರ್ವಹಿಸಿದ ಬೀದಿ ದೀಪಗಳ ಫಿಟ್ಟಿಂಗ್ಸ ಹಾಗೂ ಅಲ್ಲಿನ ಕಳಪೆ ಕೆಲಸಗಳ ಬಗ್ಗೆ.

ಶ್ರೀ ಎನ್. ರಾಜಣ್ಣ (ಭಾರತೀನಗರ ಕ್ಷೇತ್ರ) :- ಮಾನ್ಯ ಉಪಾಧ್ಯಕ್ಷರೇ, ವಿಧಾನ ಸಭೆಯ ಮಾನ್ಯ ಸದಸ್ಯರು ಹಾಗೂ ಇಂಧನ ಇಲಾಖಾ ವಿಷಯ ಸಮಿತಿಯ ಅಧ್ಯಕ್ಷರು ಆದ ಶ್ರೀ ಜಿ. ಬಿ. ಶಿವಕುಮಾರ್‌ರವರು ಈಸ್ಟ ಆಫ್ ಎನ್. ಜಿ. ಇ. ಎಫ್. ಬಡಾವಣೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಬೀದಿ ದೀಪಗಳ ಫಿಟ್ಟಿಂಗ್ಸ್ ಹಾಗೂ ಅಲ್ಲಿನ ಕಳಪೆ ಕೆಲಸಗಳ ಬಗ್ಗೆ ವಿವರವಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರಿಗೆ ಬರೆದ ಪತ್ರದ ಮೇಲೆ ಯಾವ ಕ್ರಮ ಕೈಗೊಂಡಿದ್ದಾರೆ? ಬಿ. ಡಿ. ಎ. ಯವರು ಕೆ. ಇ. ಬಿ. ಗೆ ಈಸ್ಟ್ ಆಫ್ ಎನ್. ಜಿ. .ಇ. ಎಫ್ ಬಡಾವಣೆಗೆ ವಿದ್ಯುತ್ ಕೆಲಸಕಾರ್ಯಗಳಿಗೆ ನೀಡಿರುವ ಹಣವೆಷ್ಟು? ಹಾಗೂ ವಿದ್ಯುತ್ ಸಾಮರ್ಥವೆಷ್ಟು? ಹಾಗಾದರೆ ಇದುವರೆಗೆ ಸಮರ್ಪಕವಾಗಿ ಕೆಲಸ ಮಾಡಿರುವುದಿಲ್ಲ ಕಾರಣವೇನು? ಈ ಹಿಂದೆ ಇದ್ದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಅಸಮರ್ಪಕ ಕೆಲಸ ಮಾಡಿರುವುದು ಹಾಗೂ ಬಿ. ಡಿ. ಎ. .....

ಉಪಾಧ್ಯಕ್ಷರು :- ನೀವು ಇಲ್ಲಿಗೆ ಕಳುಹಿಸಿರುವುದು ಬೇರೆ, ನೀವು ಅಲ್ಲಿ ಓದುತ್ತಿರುವುದು ಬೇರೆ.

ಶ್ರೀ ಎನ್ ರಾಜಣ್ಣ :- ನಾನು ಓದುತ್ತಿರುವುದು ನಿಯಮ 351 ರ ಅಡಿಯಲ್ಲಿ ಕಳುಹಿಸಿದ ಸೂಚನೆ ಈ ಹಿಂದಿನ ಕಾರ್ಯನಿರ್ವಾಹಕ ಸಹಾಯಕ ಇಂಜಿನೀಯರ್ ರವರು ಅಸಮರ್ಪಕ ಕೆಲಸ ಮಾಡಲು ಹಾಗೂ ಬಿ. ಡಿ. ಎ. ಯವರು ಒದಗಿಸಿದ ಬೀದಿ ದೀಪಗಳ ಫಿಟ್ಟಿಂಗ್ಸ್ ಅಳವಡಿಸಲಾಗದೆ ಕರ್ತವ್ಯ ಲೋಪವಾಗಿರುವುದಕ್ಕೆ ಏನು ಕ್ರಮ ತೆಗದುಕೊಂಡಿದ್ದೀರಿ? ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಮುಖ್ಯ ಇಂಜಿನೀಯರ್ ರವರನ್ನು ಈ ಕೂಡಲೇ ಈ ಬಡಾವಣೆಗೆ ಭೇಟಿ ನೀಡಿ ಅಲ್ಲಿ ನಡೆದಿರುವ ಅಸಮರ್ಪಕ ಕಾರ್ಯಗಳ ಬಗ್ಗೆ ಹಾಗೂ ಎಷ್ಟು ಬೀದಿ ದೀಪಗಳ ಫಿಟ್ಟಿಂಗ್ಸ್‌ನ್ನು ಅಳವಡಿಸಿದ್ದಾರೆಂದು ವರದಿಯನ್ನು ತರಿಸಿದ ಮೇಲೆ ಕೇಳಿದ ಎಲ್ಲಾ ವಿಷಯಗಳನ್ನು ಸಭೆಯ ಮುಂದಿಡಲು ಹಾಗೂ ಉತ್ತರವನ್ನು ನೀಡಬೇಕೆಂದು ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು (ಸನ್ಮಾನ್ಯ ಉಪಮುಖ್ಯ ಮಂತ್ರಿಗಳ ಪರವಾಗಿ) :-

ಇಂಧನ ಇಲಾಖೆಯ ವಿಷಯ ಸಮಿತಿಯ ಅಧ್ಯಕ್ಷರು ಈಸ್ಟ ಆಫ್ ಎನ್. ಜಿ. ಇ. ಎಫ್ ಬಡಾವಣೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಬೀದಿ ದೀಪಗಳ ಫಿಟ್ಟಿಂಗ್ಸ್ ಹಾಗೂ ಅಲ್ಲಿನ ಕಳಪೆ ಕೆಲಸಗಳ ಬಗ್ಗೆ ವಿವರವಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರಿಗೆ ಬರೆದ ಪತ್ರದ ಮೇಲೆ ಮಂಡಳಿಯ ಪೂರ್ವ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ರವರಿಗೆ ಈ ವಿಷಯದ ಬಗ್ಗೆ ಪರಿಶೀಲನೆ ನಡೆಸಿ ವಿವರವಾದ ವರದಿಯನ್ನು ಮಂಡಳಿಗೆ ಸಲ್ಲಿಸುವಂತೆ ನಿರ್ದೇಶನ ನೀಡಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈಸ್ಟ ಆಫ್ ಎನ್. ಜಿ. ಇ. ಎಫ್ ಬಡಾವಣೆಗೆ ವಿದ್ಯುತ್ ದೀಪಗಳನ್ನು ಹಾಕಲು ಮತ್ತು ಅದರಲ್ಲಿರುವ 3742 ನಿವೇಶನಗಳಿಗೆ ವಿದ್ಯುತ್ ವಿತರಣೆಯ ವ್ಯವಸ್ಥೆಯನ್ನು ಕಲ್ಪಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ 110 ಲಕ್ಷ ರೂಗಳನ್ನು ಸಂದಾಯ ಮಾಡಿದೆ. ಇಲ್ಲಿನ ನಿವೇಶನದಾರರು ಹೆಚ್ಚಿನ ಸಂಖ್ಯೆಗಳಲ್ಲಿ ಮನೆಗಳನ್ನು

ಕಟ್ಟದೆ ವಿರಳವಾಗಿ ಮನೆಗಳನ್ನು ಕಟ್ಟಿದ್ದರೂ, ವಿದ್ಯುತ್ ವಿತರಣೆ ವ್ಯವಸ್ಥೆಯನ್ನು ಮಂಡಳಿಯು ನಿರ್ಮಾಣ ಮಾಡಿದೆ. ಮನೆ ಕಟ್ಟಿರುವ ಮಾಲೀಕರುಗಳಿಗೆ ವಿದ್ಯುತ್ ಸಂಪರ್ಕವನ್ನು ವ್ಯವಸ್ಥೆ ಮಾಡಿದೆ. ಇನ್ನೂ ಮನೆಗಳು ಕಟ್ಟದೆ ಇರುವ ಜಾಗಗಳಲ್ಲಿ ಮಂಡಳಿಯ ಕೆಲವು ಸಾಮಾಗ್ರಿಗಳು ಕಳ್ಳತನಗೊಂಡಿರುವುದೂ ಸಹ ಗಮನಕ್ಕೆ ಬಂದಿದೆ.

ಸದರಿ ಬಡಾವಣೆಯಲ್ಲಿ ಟ್ಯೂಬ್‌ಲೈಟ್ ಪಿಟ್ಟಿಂಗ್‌ಗಳನ್ನು ಹಾಕಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಟ್ಯೂಬ್‌ಲೈಟ್ ಪಿಟ್ಟಿಂಗ್‌ಗಳನ್ನು ಒದಗಿಸಿದ್ದು, ಈ ಎಲ್ಲಾ 400 ಟ್ಯೂಬ್‌ಲೈಟ್ ಪಿಟ್ಟಿಂಗ್‌ಗಳನ್ನು ಅಲ್ಲಿನ ನಿವಾಸಿಗಳ ಸಂಘದೊಡನೆ ಸಮಾಲೋಚಿಸಿ ಅವರು ಅಪೇಕ್ಷಿಸಿದ ಸ್ಥಳಗಳಲ್ಲಿಯೇ ಟ್ಯೂಬ್‌ಲೈಟ್ ಪಿಟ್ಟಿಂಗ್‌ಗಳನ್ನು ಹಾಕಿದೆ. ಬಾಕಿ ಉಳಿದ ಸ್ಥಳಗಳಲ್ಲಿ ಬೀದಿ ದೀಪಗಳನ್ನು ಹಾಕಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಟ್ಯೂಬ್‌ಲೈಟ್ ಪಿಟ್ಟಿಂಗ್‌ಗಳನ್ನು ಮಂಡಳಿಗೆ ಒದಗಿಸಬೇಕಾಗುತ್ತದೆ.

ಈಗಾಗಲೇ ಇಂಧನ ಇಲಾಖೆಯ ವಿಷಯ ಸಮಿತಿಯ ಅಧ್ಯಕ್ಷರು ಈ ವಿಷಯದಲ್ಲಿ ಮಂಡಳಿಯ ಅಧ್ಯಕ್ಷರಿಗೆ ಬರೆದ ಪತ್ರದ ಬಗ್ಗೆ ವಿವರವಾದ ವರದಿಯು ಪೂರ್ವ ವಿಭಾಗದ ಕಾರ್ಯ ನಿರ್ವಾಹಕ ಇಂಜಿನೀಯರ್ (ವಿದ್ಯುತ್) ರವರಿಂದ ನಿರೀಕ್ಷಿಸಲ್ಪಡುತ್ತಿರುವುದರಿಂದ ಸದರಿ ಅಧಿಕಾರಿಯವರು ನೀಡುವ ವರದಿಯನ್ನು ಸವಿವರವಾಗಿ ಪರಿಶೀಲಿಸಿ, ಅಸಮರ್ಪಕ ಕಾರ್ಯಗಳೇನಾದರೂ ಜರುಗಿರುವುದು ಕಂಡುಬಂದಲ್ಲಿ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದು ಕೊಳ್ಳಲಾಗುವುದು.

(4) ಸಂಜಯಗಾಂಧಿ ಆಸ್ಪತ್ರೆಯಲ್ಲಿ ನಡೆದಿರುವ ಅವ್ಯವಹಾರ.

ಶ್ರೀ ಯು. ಆರ್. ಸಭಾಪತಿ (ಉಡುಪಿ ಕ್ಷೇತ್ರ) :- ಸನ್ಮಾನ್ಯ ಉಪಾಧ್ಯಕ್ಷರೇ, ಅಪಘಾತಕ್ಕೆ ಒಳಗಾಗಿ ಕೈಕಾಲು ಕಳೆದಕೊಂಡು ಬರುವ ರೋಗಿಗಳಿಗಾಗಿ ತುರ್ತು ಚಿಕಿತ್ಸೆ ನೀಡುವ ಉದ್ದೇಶದಿಂದ ತೆರೆದಿರುವ ಸಂಜಯಗಾಂಧಿ ಅಪಘಾತ ಆಸ್ಪತ್ರೆಯಲ್ಲಿ 1992 ಜೂನ್ ನಲ್ಲಿ ಡಾ : ಆರ್. ಎ. ಪರುಂಗುದಾಸ್, ಆಡಳಿತ ಮುಖ್ಯಸ್ಥರಾಗಿ ನೇಮಕಗೊಂಡ ಮೇಲೆ ಆಗಿರತಕ್ಕಂಥ ಅವ್ಯವಸ್ಥೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಅವರ ನೇಮಕಾತಿ ಮತ್ತು ಅವ್ಯವಸ್ಥೆಯ ಬಗ್ಗೆ ಸಾಕಷ್ಟು ಮನವಿಗಳನ್ನು ಮುಖ್ಯಮಂತ್ರಿಗಳಿಗೆ ಹಾಗೂ ಆರೋಗ್ಯ ಸಚಿವರಿಗೆ ಸಲ್ಲಿಸಿದ್ದರೂ ಸದರಿ ಆಸ್ಪತ್ರೆಯಲ್ಲಿ ಆಗಿರುವ ಅವ್ಯವಸ್ಥೆಯ ಅಚಾತುರ್ಯಗಳಿಗೆ ಕಾರಣರಾಗಿರುವ ಡಾ : ಪರುಂಗುದಾಸ್ ವಿರುದ್ಧ ಕ್ರಮಕೈಗೊಳ್ಳಲು ಸರ್ಕಾರದ ವಿಳಂಬ ನೀತಿಗೆ ಕಾರಣಗಳೇನು?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) (ಆರೋಗ್ಯ ಸಚಿವರ ಪರವಾಗಿ) :- 1984 ರಲ್ಲಿ ಸಂಜಯಗಾಂಧಿ ಆಸ್ಪತ್ರೆಯನ್ನು ರಸ್ತೆ ಅಪಘಾತ ದಲ್ಲಿ ಗಾಯಗೊಂಡವರಿಗೆ ತುರ್ತು ಚಿಕಿತ್ಸೆ ನೀಡಿ ಅವರನ್ನು ಪ್ರಾಣಾಪಾಯದಿಂದ ಪಾರು ಮಾಡುವ ಉದ್ದೇಶದಿಂದ ಪ್ರಾರಂಭ ಮಾಡಲಾಯಿತು. ತದನಂತರ ತಾತ್ಕಾಲಿಕವಾಗಿ ಜಯನಗರ ಸಾರ್ವಜನಿಕ ಆಸ್ಪತ್ರೆಯ ಕಟ್ಟಡದ ಒಂದು ಭಾಗವನ್ನು ಈ ಆಸ್ಪತ್ರೆಯ ಉಪಯೋಗಕ್ಕಾಗಿ ಪಡೆಯಲಾಯಿತು.